ಕರ್ನಾಟಕ ಸರ್ಕಾರ "ನೆನಪೋಲೆ"

ಸಂಖ್ಯೆ: ಡಿಟಿಇ/66/ಮಾಹಕಾ/2019

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560001,
ದಿನಾಂಕ: 4-6-2020.

## ಸುತ್ತೋಲೆ

ವಿಷಯ ಮಾಹಿತಿ ಹಕ್ಕು ಅಧಿನಿಯಮ 2005 ರಡಿ ದಿನಾಂಕ: 1-4-2019 ರಿಂದ 31-3-2020 ರವರೆಗಿನ ವಾರ್ಷಿಕ ವರದಿಯನ್ನು ತಯಾರಿಸಿ ಕಳುಹಿಸುವ ಬಗ್ಗೆ.

ಉಲ್ಲೇಖ ಇದೇ ಸಮ ಸಂಖ್ಯೆ ಪತ್ರ ದಿನಾಂಕ: 4-3-2020.

****

ಮಾಹಿತಿ ಹಕ್ಕು ಕಾಯ್ದೆ 2005ರಡಿ ಮಾರ್ಚ್ 2020 ಕ್ಕೆ ಅಂತ್ಯಗೊಂಡಂತೆ, ವಾರ್ಷಿಕ ವರದಿಯನ್ನು ಕ್ರೋಢೀಕರಿಸಿ, ಸರ್ಕಾರಕ್ಕೆ ಸಲ್ಲಿಸುವ ಸಲುವಾಗಿ ತಮ್ಮ ಸಂಸ್ಥೆಗೆ ಸಂಬಂಧಿಸಿದಂತೆ, ಮಾಹಿತಿ ಹಕ್ಕು ಅಧಿನಿಯಮ 2005 ರ ನಿಯಮ 4(1)ಎ ಮತ್ತು 4(1) ಬಿ ಯನ್ನು ಕಾಲೋಚಿತಗೊಳಿಸುವಂತೆ ಹಾಗೂ ದಿನಾಂಕ: 1-4-2019 ರಿಂದ 31-3-2020 ರವರೆಗಿನ ವಾರ್ಷಿಕ ವರದಿಯನ್ನು ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿ ಈ ಕಛೇರಿಗೆ ಕಳುಹಿಸಿಕೊಡಲು ಮೇಲ್ಕಂಡ ಉಲ್ಲೇಖದ ಪತ್ರದಲ್ಲಿ ತಿಳಿಸಲಾಗಿರುತ್ತದೆ. ಇನ್ನೂ ಹಲವಾರು ಸಂಸ್ಥೆಗಳು ಇದುವರೆವಿಗೂ ವಾರ್ಷಿಕ ವರದಿಯನ್ನು ಸಲ್ಲಿಸಿರುವುದಿಲ್ಲ ಆದುದರಿಂದ ಆಯಾ ಸಂಸ್ಥೆಯ ಸಾರ್ವಜನಿಕ ಮಾಹಿತಿ ಅಧಿಕಾರಗಳು ಹಾಗೂ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಈ ವಿಷಯವನ್ನು ಅತಿ ತುರ್ತು ಎಂದು ಪರಿಗಣಿಸಿ ತಮ್ಮ ವೈಯಕ್ತಿಕ ಗಮನಹರಿಸಿ ವಿವರಗಳನ್ನು ಕಳುಹಿಸಿಕೊಡಲು ತಿಳಿಸಿದೆ.

ನಿರ್ದೇಶಕರು.

ಇವರಿಗೆ:

1. ಪ್ರಾಚಾರ್ಯರು, ಎಲ್ಲಾ ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು.
2. ಪ್ರಾಚಾರ್ಯರು ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳು.
3. ಪ್ರಾಚಾರ್ಯರು, ಎಲ್ಲಾ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳು.
4. ಇ-ಆಡಳಿತ ವಿಭಾಗಕ್ಕೆ- ವೆಬ್ ಸೈಟ್ ನಲ್ಲಿ ಪ್ರಚುರ ಪಡಿಸಲು.